## ಇಲ್ಲಿಯವರೆಗೆ



ಪ್ರೇಮ್ ಮಾನಸಿಕ ರೋಗಿ ಎಂಬ ಚರ್ಚೆಗೆ ಒಳಗಾಗಿದ್ದು, ಆದರೂ ಅವನು ಬುದ್ಧಿವಂತ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಕಲ್ಯಾಣಿ ಪ್ರೇಮ್‌ನ ಫೋನ್ ಎತ್ತಿ ಸಂಭಾಷಣೆ ಡಿಲೀಟ್ ಮಾಡುತ್ತಾಳೆ. 'ನಿನ್ನ ಚರಿತ್ರೆ ಅದರಲ್ಲಿಲ್ಲ, ಈ ಫೋನ್‌ನಲ್ಲಿದೆ' ಎಂದಿದ್ದು ಆಕೆಗೆ ಬಾಗಿಲ ಬಳಿಯಿಂದ ಕೇಳಿಸಿತು. ಆಗ ಅವಳು ಬೆಚ್ಚಿ ಆ ಕಡೆ ತಿರುಗಿ ನೋಡುತ್ತಾಳೆ. ಪ್ರೇಮ್ ನಗುತ್ತಾ ಒಳಗೆ ಬರುತ್ತಾನೆ. 'ನಾನು ಫೋನ್ ಮರೆತು ಹೋಗಲಿಲ್ಲ. ಬೇಕೆಂದೇ ಅಲ್ಲಿ ಬಿಟ್ಟಿದ್ದೆ. ಆ ಮೊಬೈಲ್‌ಗೆ ಫೋನ್ ಮಾಡಿದ್ದೂ ನಾನೇ. ಯಾಕೆ ಗೊತ್ತಾ? ನಿನ್ನನ್ನು ಈ ರೂಂಗೆ ಕರೆಸಿಕೊಳ್ಳುವುದಕ್ಕೆ! ನಿಮ್ಮ ಮನೆಗಿಂತ ನಾವಿಬ್ಬರೂ ಇಲ್ಲಿ ಸೇಫ್' ಎಂದು ಹೇಳುತ್ತಾನೆ. ವಿಮಾನ ತಡವಾದ ಹಿನ್ನೆಲೆಯಲ್ಲಿ ಕೃಷ್ಣ ಮನೆಗೆ ಬರುತ್ತಾನೆ. ಆಗ ಕಲ್ಯಾಣಿ ಪ್ರೇಮ್‌ನಲ್ಲಿ ರೂಮ್‌ನಲ್ಲಿ ನೋಡಿ ವಿಪರೀತ ಸಿಟ್ಟುಗೊಳ್ಳುತ್ತಾನೆ. ಆಕೆ ಕರ್ಟನ್ ಹಿಂದೆ ಅವಿತುಕೊಂಡದ್ದು ನೋಡಿ ಕೃಷ್ಣನಿಗೆ ಮತ್ತೂ ಕೋಪ ಬರುತ್ತದೆ. ಇತ್ತ ಮಿಜ್ರಾಡಿನ್ ಇದ್ದ ತೋಟದ ಮನೆಗೆ ಗಫಾರ್‌ಖಾನ್‌ನಲ್ಲಿ ಜೀಪ್‌ನಲ್ಲಿ ಕರೆದುಕೊಂಡು ಹೋಗುತ್ತಾರೆ. ಚಪಾತಿ ತಿನ್ನುತ್ತಿದ್ದ ಮಿಜ್ರಾಡಿನ್‌ನನ್ನು ಕಂಡು ಗಫಾರ್‌ಖಾನ್‌ಗೆ ಶಾಕ್ ಆಗುತ್ತದೆ. ಮಿಜ್ರಾಡಿನ್‌ನ ಪೊಲೀಸ್‌ಕೇಸ್ ಬಗ್ಗೆ ಚರ್ಚೆ ನಡೆಯುತ್ತದೆ. ಇಮ್ತಿಯಾಜ್ ಕಷ್ಟದಲ್ಲಿರುವ ಸೂಚನೆ ಸಿಗುತ್ತದೆ.

ಸಲಹೆ ಕೇಳಿದಾಗ ಐಡಿಯಾ ಚೆನ್ನಾಗಿದೆಯೆಂದು ನೀವು ಕೂಡ ಪ್ರೋತ್ಸಾಹ ಕೊಟ್ಟಿರಿ. ನಮ್ಮ ಮದುವೆ ವಿಷಯ ಎಲ್ಲರಿಗೂ ತಿಳಿಯಲಿ ಎಂದು ನಮ್ಮ ಸ್ವಾಮಿಯವರಿಗೆ ಕಾಶ್ಮೀರದಿಂದ ಫೋನ್ ಮಾಡಿದೆ. ನಾವು ಅಂದುಕೊಂಡ ಹಾಗೆ ಸುದ್ದಿ ವೇಗವಾಗಿ ಹರಡಿತು'

ಕುಕ್ಕುಟೇಶ್ವರಸ್ವಾಮಿ ನಾಚಿಕೆಯಿಂದ ತಲೆತಗ್ಗಿಸಿದನು.

'ತಂದೆಯನ್ನು ರಕ್ಷಿಸಿಕೊಳ್ಳುವುದಕ್ಕೆ ಕಲ್ಯಾಣಿ ಬಹಳ ಶ್ರಮ ಪಟ್ಟಿದ್ದಾಳೆ ಸರ್, ಹಾವನ್ನು ಹುತ್ತದಿಂದ ಹೊರಗೆ ಬರಿಸುವುದಕ್ಕೆ ಅವಳು ತೆಗೆದುಕೊಂಡ ರಿಸ್ಕ್ ಬಹಳ ದೊಡ್ಡದು'.

***

ಅವನು ಅಲ್ಲಿ ಆಡುತ್ತಿದ್ದ ಮಾತುಗಳನ್ನೇ ಕಲ್ಯಾಣಿ ಇಲ್ಲಿ ಇಮ್ತಿಯಾಜ್‌ಗೆ ಹೇಳುತ್ತಿದ್ದಳು.

'ಹಾವನ್ನು ಹೊರಗೆ ತರಿಸಬೇಕೆಂದರೆ ಹುತ್ತದೊಳಗೆ ಹೊಗೆ ಬಿಡಬೇಕು. ನಿನ್ನ ಸುತ್ತಲೂ 'ಬಯಕೆ' ಎಂಬ ಹೊಗೆ ಹಾಕಿದೆವು. ಗಂಡ ಹೆಂಡತಿ ನಡುವೆ ಜಗಳಗಳಿವೆ ಎಂಬ ಅಭಿಪ್ರಾಯ ಬರಿಸಿದೆವು. ನಿನಗೆ ಕೇಳಿಸುವ ಹಾಗೆ ಕೃಷ್ಣನನ್ನು ನಾನು ಬೈದೆ. ನಿನಗೆ ಕಾಣಿಸುವ ಹಾಗೆ ಅವನು ನನಗೆ ಹೊಡೆದನು. ಅದೆಲ್ಲ ನಾಟಕವೇ. ಎಲ್ಲಕ್ಕಿಂತ ಮುಖ್ಯ ವಿಷಯ ಏನು ಗೊತ್ತಾ? ನಾನು ಎಕ್ಸ್‌ಪರ್ಟ್ ಸ್ವಿಮ್ಮರ್. ಆದರೆ ನಿನ್ನೆದುರು ಈಜು ಬರದವಳ ಹಾಗೆ ನಟಿಸಿದೆ. ನಿನ್ನ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದಲೇ ಕೃಷ್ಣ ನನ್ನನ್ನು ನೀರಿಗೆ ತಳ್ಳಿದ' ಎಂದಳು. ತನ್ನ ಕಿವಿಯನ್ನು ತಾನೇ ನಂಬದವನಂತೆ ದಿಗ್ಭ್ರಾಂತನಾಗಿ ಅವನು ನೋಡುತ್ತಿರುವಾಗ ಕಲ್ಯಾಣಿ, 'ನನ್ನನ್ನು ಸ್ವಿಮ್ಮಿಂಗ್ ಪೂಲ್‌ನಿಂದ ಕಾಪಾಡಿ, ನೀವು ನೀನು ನಮ್ಮ ಟ್ರಾಪ್‌ನಲ್ಲಿ ಬಿದ್ದು ಬಿಟ್ಟೆ ಮಿಸ್ಟರ್ ಇಮ್ತಿಯಾಜ್ ಬಿನ್ ಲಾಡೆನ್' ಎಂದಳು.

ನೀರಿನಲ್ಲಿ ನೆನೆದು ಪೂಲ್ ದಡದ ಮೇಲೆ ನಡುಗುತ್ತಿದ್ದ ಕಲ್ಯಾಣಿಗೂ, ಈಗ ತನ್ನ ಎದುರಿನಲ್ಲಿ ದಡದ ಮೇಲೆ ನಿಂತುಕೊಂಡಿದ್ದ ಹೆಂಗಸಿಗೂ ಮಧ್ಯದ ವ್ಯತ್ಯಾಸವನ್ನು ವಿಸ್ಮಯಗೊಂಡು ನೋಡುತ್ತಿದ್ದನು ಇಮ್ತಿಯಾಜ್.

ರಾವಣ ಸಂಹಾರಕ್ಕಾಗಿ ಉದ್ಭವಿಸಿದ ಸೀತೆ ಅಶೋಕ ವೃಕ್ಷದ ಕೆಳಗೆ ಕುಳಿತಿರುತ್ತಾಳೆ. ಆಕೆ ಹೇಗೆ ಇದ್ದಳು? ರಾಮಚಂದ್ರನ ವಿರಹವೆಲ್ಲ ಸ್ತ್ರೀಯಾಗಿ ಮೂರ್ತೀಭವಿಸಿದರೆ ಅದೇ ಸೀತೆ ಎನ್ನುವ ಹಾಗಿದ್ದಳು. ಅವಳನ್ನು ಕರೆತಂದವರು ಯಾರು? ದೈತ್ಯಭಾವವನ್ನು ತೊರೆಯದ ಒಬ್ಬ ಪರಸ್ತ್ರೀ ವ್ಯಾಮೋಹಿ.

ಅವನು ಸೀತೆಯ ಕಡೆ ನೋಡಿದನು.

ಅವಳ ಕಣ್ಣುಗಳು ರಾಮನ ಬಿಲ್ಲಿನ ಹಾಗಿದ್ದವಂತೆ. ಆ ಬಿಲ್ಲೇ ಅಲ್ಲವೇ ರಾವಣನ ಭವಿಷ್ಯತ್ತನ್ನು ಸಾಯಿಸುವುದು! ಅವಳು ಕುಳಿತಿದ್ದ ಭಂಗಿಯಲ್ಲೇ ರಾವಣ ನಿರ್ಮೂಲದ ನಿಶ್ಚಲತೆಯೂ ಕಾಣಿಸುತ್ತಿದ್ದವು. ಪ್ರಸ್ತುತ ಸಂದರ್ಭವೂ ಅಂತಹುದೇ. ಎರಡು ದಿನಗಳ ಹಿಂದೆ 'ಪ್ಲೀಸ್... ನನ್ನನ್ನು ಬಿಟ್ಟುಬಿಡು' ಎಂದು ಮುಗಿದಿದ್ದ ಆ ಕೈಗಳೇ ಈಗ ಬಿಲ್ಲು ಧರಿಸಿರುವಂತೆ ಇದ್ದವು.

ಸೀತೆಯ ಕಂಗಳಲ್ಲಿ ಬಿಲ್ಲನ್ನು ಕಂಡ ಕವಿಯ (ವಿಶ್ವನಾಥ ಸತ್ಯನಾರಾಯಣ) ಪದ್ಯದ ಸೊಗಸಿಗೆ, ಜ್ಞಾನಪೀಠಕ್ಕೆ ಶಿರಬಾಗಿ ನಮಿಸಿ ಮತ್ತೆ ನಮ್ಮ ಕಥೆಗೆ ಬರೋಣ.

'ನನ್ನನ್ನು ಹೇಗಾದರೂ ಅನುಭವಿಸಬೇಕೆನ್ನುವುದು ನಿನ್ನ ಆಸೆ. ಅದು ತಡವಾದ ಹಾಗೆ ನಿನ್ನ ಹುಚ್ಚು ಆಸೆ ಕೆರಳುತ್ತಾ ಹೋಯಿತು. ನಾನು ಸುಲಭವಾಗಿ ಒಪ್ಪಿಕೊಳ್ಳುತ್ತೇನೆಂದೂ, ನಾನು ವಲ್ನರಬಲ್ ಎಂದೂ ನಿನ್ನಲ್ಲಿ ನಂಬಿಕೆ ಹುಟ್ಟಿಸುವುದಕ್ಕಾಗಿ ಕೃಷ್ಣನ ಗಂಡಸುತನ ಇಲ್ಲದವನ ಹಾಗೆ ನಾಟಕವಾಡಿದ. ಹಾಗಾಗಿ ನನ್ನನ್ನು ಬಲೆಗೆ ಹಾಕಿಕೊಳ್ಳುವುದು ಸುಲಭ ಅಂದುಕೊಂಡೆ. ಅದಕ್ಕಾಗಿ ಎಷ್ಟೋ ಟ್ರಿಕ್ಸ್ ಮಾಡಿದೆ. ಅದನ್ನೆಲ್ಲ ನಾನು ಕೂಡಲೇ ನಿವಾರಿಸಿಕೊಳ್ಳುತ್ತ ಬಂದೆ. ನೀನು ಕಿಟಕಿಯಲ್ಲಿ ರಂಧ್ರ ಕೊರೆದು ನಾವಾಡುವ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದೀಯ ಅಂತ ನಮಗೆ ತಿಳಿದಿತ್ತು. ನಿನಗೆ ತಿಳಿಯದ ವಿಷಯವೆಂದರೆ ನಮ್ಮಿಬ್ಬರ ಮಾತುಗಳನ್ನು ಕೃಷ್ಣ ಹೊರಗಿನಿಂದ ಕೇಳಿಸಿಕೊಳ್ಳುತ್ತಿದ್ದ ಎನ್ನುವುದು. ನೀನು ನನ್ನ ಮೇಲೆ ಕೈ ಹಾಕಲಿಕ್ಕೆ ಎರಡು ಬಾರಿ ಪ್ರಯತ್ನಿಸಿದಾಗಲೂ ಕೃಷ್ಣ ಬಂದಿದ್ದು ಆ ನಾಟಕದ ಭಾಗವೇ ಆಗಿತ್ತು ಎನ್ನುವುದು'.

ಪ್ರೇಮ್‌ಜಿತ್‌ನ ಮುಖ ಕಪ್ಪಿಟ್ಟಿತು.

'ಕೃಷ್ಣನ ಕೊಲೆ ಕೇಸ್‌ನಲ್ಲಿ ಪೊಲೀಸರು ನನಗೋಸ್ಕರ ಹುಡುಕುತ್ತಿರುವುದು, ರಕ್ತದಲ್ಲಿ ನನ್ನ ಫಿಂಗರ್‌ಪ್ರಿಂಟ್ಸ್, ಷೂಟ್ ಅಟ್ ಸೈಟ್ ಆರ್ಡರ್, ಕಾಶ್ಮೀರದಲ್ಲಿ ನಮ್ಮ ತಂದೆ ಎಲ್ಲಿದ್ದಾರೆಂದು ನಿನಗೆ ತಿಳಿದಿದ್ದು, ನನ್ನ ಗಂಡ ಗುಂಡು ಹಾಕಿ ಇದನ್ನೆಲ್ಲ ನಿನಗೆ ಹೇಳಿದ ಅಂತ ನೀನು ಕಥೆ ಕಟ್ಟಿದ್ದು... ನೀನು ಹೀಗೆ ಹೇಳಿದಾಗಲೆಲ್ಲ ಮನಸ್ಸಿನಲ್ಲೇ ನಗುತ್ತಿದ್ದೆ. 'ನನ್ನ ಸುತ್ತ ಬಲೆ ಹೆಣೆಯುತ್ತಿದ್ದೇನೆ ' ಅಂತ ನೀನು ತಿಳಿದು ನಮ್ಮ ಬಲೆಗೆ ಬಿದ್ದು ಬಿಟ್ಟೆ. ಒಂದು ಕಡೆ ನಾನು ಅಪಾಯದಲ್ಲಿ ಇರುವ ಹಾಗೆ, ಕ್ರಮೇಣ ನಿನ್ನನ್ನು ಅವಲಂಬಿಸಿದ ಹಾಗೆ, ಮತ್ತೊಂದು ದಿನ ಕಳೆದರೆ ನಿನ್ನವಳಾಗುತ್ತೇನೆ ಎಂಬ ಇಂಪ್ರೆಷನ್ ಬರಿಸಿದೆ. ಮತ್ತೊಂದು ಕಡೆ ಪೊಲೀಸರು ನಮ್ಮನ್ನು ಬೆನ್ನಟ್ಟಿರುವ ಹಾಗೆ, ಹೆಚ್ಚು ಟೈಂ ಇಲ್ಲ ಎಂದು ನಿನ್ನನ್ನು ಮಾನಸಿಕವಾಗಿ ಬಲಹೀನನನ್ನಾಗಿ ಮಾಡಿದೆ. 'ಬಾಗಿಲು ಮುಚ್ಚಿ ಹೊಡೆದರೆ ಬೆಕ್ಕು ಕೂಡ ಎದುರು ಬೀಳುತ್ತದೆ' ಎನ್ನುವುದು ಹಳೆಯ ಗಾದೆ. 'ನಾಲ್ಕು ದಿಕ್ಕನಿಂದ ಹೊಡೆದರೆ ಹುಲಿ ಕೂಡ ದಾರಿಗೆ ಬರುತ್ತದೆ' ಎನ್ನುವುದು ನನ್ನ ನಂಬಿಕೆ. ಇಂಜೆಕ್ಷನ್ ಇಲ್ಲದಿದ್ದರೆ ನೀನು ಬದುಕುವುದಿಲ್ಲ ಅಂತ ನಮಗೆ ಗೊತ್ತು, ನೀನು ಹಳ್ಳಕ್ಕೆ ಬಿದ್ದ ತಕ್ಷಣ ಇಂಜೆಕ್ಷನ್ ಟೈಂ ಹತ್ತಿರವಾಯ್ತು ಎಂತ ನೆನಪು ಮಾಡಿದೆ. ಸುತ್ತ ಬಲೆ ಬಿಗಿಯಾಗುತ್ತಾ ಹೋದರೆ ನೀನು ನಿಮ್ಮಪ್ಪನಿಗೆ ಫೋನ್ ಮಾಡುತ್ತೀಯ ಅಂತ ಅಂದುಕೊಂಡೆವು. ಅದಕ್ಕೇ ನಿನ್ನನ್ನು ಕರೆತಂದು ಇಲ್ಲಿ ಬೀಳುವ ಹಾಗೆ ಮಾಡಿದೆವು... ಅಂದ ಹಾಗೆ ಈ ಗುಂಡಿ ತೋಡಿದ್ದು ಕೂಡ ನಾವೇ' ಎಂದಳು.

'ಇಷ್ಟು ಪ್ಲಾನ್ ಮಾಡಿದಿರಾ?'

ಅವಳು ಎದ್ದು ನಿಂತು ತೋರು ಬೆರಳು ತೋರಿಸುತ್ತಾ 'ತಲೆ ಮೇಲೆ ರೂಪಾಯಿ ಇಟ್ಟರೂ ನಯಾಪೈಸೆಗೆ ಮಾರಾಟವಾಗದ ಹುಚ್ಚು ಮುಂಡೇ ಮಗನೇ, ನಮ್ಮ ರಕ್ಷಣಾ ವ್ಯವಸ್ಥೆ ಇಷ್ಟು ಸ್ಟ್ರಾಂಗ್ ಇರುವುದರಿಂದಲೇ ಭಾರತದ ಪ್ರಜೆಗಳು ಸುಖ ಶಾಂತಿಯಿಂದ ಬದುಕಿದ್ದಾರೋ, ನೀನೂ– ನಿನ್ನಪ್ಪನಂತಹ ಟೆರರಿಸ್ಟ್‌ಗಳೂ ನಮ್ಮ ಕೂದಲು ಕೀಳಲಾರಿರಿ' ಎಂದಳು ಸಿಟ್ಟಿನಿಂದ. ತಾನು ಅಂತಹ ಮಾತುಗಳನ್ನು ಆಡಬಲ್ಲೆ ಎಂದವಳು ಕನಸಿನಲ್ಲೂ ತಿಳಿದಿರಲಿಲ್ಲ. ಅಷ್ಟು ದಿನಗಳು ಶ್ರಮ, ತೆಗೆದುಕೊಂಡ ರಿಸ್ಕ್, ಬಹುಶಃ ಅವಳು ಆ ರೀತಿ